I/227556/2022

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ:42(10)-7-1:ಆರ್ ಆರ್ ಸಿ:21(ಇ-530547)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಬೆಂಗಳೂರು,
ದಿನಾಂಕ:02.03.2022

**ತಿದ್ದುಪಡಿ ಆದೇಶ**

**ವಿಷಯ:** 2021-22 ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಜೂರಾತಿ ನೀಡಿದ ರಸ್ತೆ ಕಾಮಗಾರಿಗಳನ್ನು ಬದಲಾವಣೆ ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ: ಗ್ರಾಅಪ:42(10)-7: ಆರ್‌ಆರ್‌ಸಿ:2021 (ಇ-530547), ದಿನಾಂಕ: 15.12.2021.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಸಂಖ್ಯೆ: 20054:ZP-CKM-12012(13)/95/2021-DEVE, ದಿನಾಂಕ: 03/02/2022.

********

ಓದಲಾದ -1 ರ ಆದೇಶದಲ್ಲಿ 2021-22 ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ಚಿಕಮಗಳೂರು ಜಿಲ್ಲೆಯ ಮೂಡಿಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೂ. 23.00 ಕೋಟಿಗಳ ಮೊತ್ತದಲ್ಲಿ 287 ರಸ್ತೆ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಅನುಷ್ಠಾನ ಮಾಡಲು ಆದೇಶ ಹೊರಡಿಸಲಾಗಿರುತ್ತಿದೆ.

ಓದಲಾದ -2 ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿಕ್ಕಮಗಳೂರು ರವರು ಆದೇಶ ಹೊರಡಿಸಲಾಗಿದ್ದ 287 ರಸ್ತೆ ಕಾಮಗಾರಿಗಳ ಪೈಕಿ 2 ಕಾಮಗಾರಿಗಳನ್ನು ಕೆಳಕಂಡಂತೆ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಕ್ರಮ ಸಂ | ಅನುಮೋದನೆಯಾಗಿರುವ ಕಾಮಗಾರಿ ಹೆಸರು | (ರೂ. ಲಕ್ಷಗಳಲ್ಲಿ) | ಬದಲಾವಣೆ ಕೋರಿರುವ ಕಾಮಗಾರಿ ಹೆಸರು | (ರೂ. ಲಕ್ಷಗಳಲ್ಲಿ) |
|---|---|---|---|---|
| 21 | ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಗ್ರಾ.ಪಂ. ಪೋಸ್ಟ್ ಆಫೀಸ್-ರಾಜೇಶ್ ಮನೆ ರಸ್ತೆ ಅಭಿವೃದ್ಧಿ. | 10.00 | ಅಡ್ಡಮಕ್ಕಿ ಗ್ರಾಮದ ಶ್ರೀಧರ್ ಮನೆ ಹತ್ತಿರ ರಸ್ತೆ ಅಭಿವೃದ್ಧಿ | 5.00 |
| | | | ಅಡ್ಡಮಕ್ಕಿ ಗ್ರಾಮದ ದಯಾನಂದ ಮನೆ ಹತ್ತಿರ ರಸ್ತೆ ಅಭಿವೃದ್ಧಿ | 5.00 |
| 34 | ಚಿಕ್ಕಮಗಳೂರು ತಾಲ್ಲೂಕು ದೊಡ್ಡಮಾಗರವಳ್ಳಿ ಗ್ರಾ.ಪಂ. ಹಳಿಯೂರು ಹೆಚ್.ಎಸ್ ರವಿ ಮನೆಯತ್ತಿರ ರಸ್ತೆ ಅಭಿವೃದ್ಧಿ | 5.00 | ಹೊಸಳ್ಳಿ ಗ್ರಾಮದ ಬೈರೇಶ್ ಮನೆ ಹತ್ತಿರ ರಸ್ತೆ ಅಭಿವೃದ್ಧಿ | 5.00 |
| | **ಒಟ್ಟು** | **15.00** | **ಒಟ್ಟು** | **15.00** |

ಕೋಷ್ಟಕದಲ್ಲಿರುವಂತೆ ರಸ್ತೆ ಕಾಮಗಾರಿಗಳನ್ನು ಕೆಳಕಂಡ ಷರತ್ತಿಗೊಳಪಟ್ಟು ಬದಲಾವಣೆ ಮಾಡಲು ಸರ್ಕಾರವು

2/3/22

I/227556/2022

ಅನುಮೋದಿಸಿದ್ದು, ಉಳಿದಂತೆ ಈ ಹಿಂದೆ ಹೊರಡಿಸಿರುವ ಯಾವುದೇ ಬದಲಾವಣೆಯಿರುವುದಿಲ್ಲ.

ಷರತ್ತುಗಳು:

1. ಓದಲಾದ-1 ರ ಆದೇಶದಲ್ಲಿ ಈಗಾಗಲೇ ಮಂಜೂರಾತಿ ನೀಡಿದ ರಸ್ತೆ ಕಾಮಗಾರಿಗಳು ಆರಂಭಗೊಳ್ಳದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು, ಒಂದೊಮ್ಮೆ ಕಾಮಗಾರಿಗಳು ಆರಂಭಿಸತಕ್ಕದ್ದಲ್ಲ.
2. ಹೊಸದಾಗಿ ಬದಲಾವಣೆಯ ಮಂಜೂರಾತಿಗೆ ಕೋರಿರುವ ರಸ್ತೆ ಕಾಮಗಾರಿಯು ಡಿಆರ್ ಆರ್ ಪಿ ಪಟ್ಟಿಯಲ್ಲಿರತಕ್ಕದ್ದು.
3. ಈ ಕಾಮಗಾರಿಗಳು ಇನ್ಯಾವುದೇ ಯೋಜನೆಯಲ್ಲಿ ಅಭಿವೃದ್ಧಿ ತೆಗೆದುಕೊಂಡಿರಬಾರದು ಮತ್ತು ಪುನರಾವರ್ತನೆಯಾಗಿರತಕ್ಕದ್ದಲ್ಲ. ಕಾಮಗಾರಿಗಳ ಪುನರಾವರ್ತನೆಯಲ್ಲಿ ವ್ಯತ್ಯಾಸವಿದ್ದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೇ ಜವಾಬ್ದಾರಿಯಾಗುತ್ತಾರೆ.
4. ಮತ್ತೆ ಮತ್ತೆ ಬದಲಾವಣೆಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದಲ್ಲ

ಕರ್ನಾಟಕ ರಾಜ್ಯಪಾಲರ ಆದೇಶದನುಸಾರ
ಮತ್ತು ಅವರ ಹೆಸರಿನಲ್ಲಿ

**Signed by Shrinivas H Marangappanavar**
**Date: 02-03-2022 12:18:40**

2/3/22

**(ಶ್ರೀನಿವಾಸ ಹ ಮರಂಗಪ್ಪನವರ)**
ನಿರ್ದೇಶಕರು, ಗ್ರಾಮೀಣಾಭಿವೃದ್ಧಿ
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕ ಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1), ಕರ್ನಾಟಕ , ಬೆಂಗಳೂರು.
3. ಮಹಾಲೇಖಪಾಲರು (ಆಡಿಟ್-2), ಕರ್ನಾಟಕ, ಬೆಂಗಳೂರು.
4. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (PMU) (IF), 5ನೇ ಹಂತ, ಬಹುಮಹಡಿಗಳ ಕಟ್ಟಡಮ ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
9. ವಿಶೇಷಾಧಿಕಾರಿಗಳು (ಜಿಪಂ) ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ನಿರ್ದೇಶಕರು,ಖಜಾನೆ ಇಲಾಖೆ, ಬೆಂಗಳೂರು.
12. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ , ಟ್ರೆಜರಿ ಡಿಪಾರ್ಟ್ ಮೆಂಟ್, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
13. ಅಧೀನ ಕಾರ್ಯದರ್ಶಿಗಳು (ವೆಚ್ಚ-6), ಜಿ.ಪಂ. ಆರ್ಥಿಕ ಇಲಾಖೆ , ವಿಧಾನಸೌಧ, ಬೆಂಗಳೂರು.
14. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು
15. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಬೆಂಗಳೂರು
16. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ.
17. ಮಾಹಿತಿ ಕೇಂದ್ರದ ಗಣಕ ಕೋಶ ಮುಖ್ಯಸ್ಥರು, ಗ್ರಾಅಪಂರಾ ಇಲಾಖೆ ಇವರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು
18. ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಗ್ರೂಪ್ ಮೈಲ್ ನಲ್ಲಿ ರವಾನಿಸಲು ಸೂಚಿಸಿದೆ.
19. ರಕ್ಷಾ ಕಡತ/ ಹೆಚ್ಚುವರಿ ಪ್ರತಿ